ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 11-12-2020

# ಬಿಬಿಎಂಪಿ ವಿಧೇಯಕಕ್ಕೆ ಶಾಸನಸಭೆ ಸಮ್ಮತಿ

## ಪ್ರತಿಪಕ್ಷ ಸದಸ್ಯರ ಅನುಪಸ್ಥಿತಿಯಲ್ಲಿ ಅಂಗೀಕಾರ । ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 3ರಿಂದ 4 ವಾರ್ಡ್ ಸೇರ್ಪಡೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 11-12-20

ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯು ಶಿಫಾರಸು ಮಾಡಿದ್ದ '2020ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಿಧೇಯಕ' ಉಭಯ ಸದನಗಳಲ್ಲಿ ಅಂಗೀಕಾರವಾಗಿದೆ.

ಗುರುವಾರ ವಿಧಾನಸಭೆಯಲ್ಲಿ ಪ್ರತಿಪಕ್ಷ ಸದಸ್ಯರ ಅನುಪಸ್ಥಿತಿಯಲ್ಲಿ ಮಸೂದೆ ಕುರಿತು ಚರ್ಚೆ ನಡೆಯಿತು. ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ಕಳೆದ ಬಾರಿ ಕ್ಷೇತ್ರ ಮರುವಿಂಗಡಣೆ ಮಾಡಿದಾಗ ಸಾಕಷ್ಟು ಸಮಸ್ಯೆ ಆಗಿದ್ದವು. ಅದನ್ನು ಈ ವಿಧೇಯಕದ ಮೂಲಕ ಸರಿಪಡಿಸಲಾಗುತ್ತಿದೆ. ಪ್ರಸ್ತುತ 198 ವಾರ್ಡ್ ಗಳಿದ್ದು, ಅವುಗಳನ್ನು 225ರಿಂದ 250ರವರೆಗೆ ಹೆಚ್ಚಿಸಲು ಉದ್ದೇಶಿಸಲಾಗಿತ್ತು. ಅಂತಿಮವಾಗಿ 243 ವಾರ್ಡ್ ರಚಿಸಲು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚುವರಿಯಾಗಿ 3ರಿಂದ 4 ವಾರ್ಡ್ ಸೇರ್ಪಡೆ ಮಾಡುವ ತಯಾರಿ ಮಾಡಲಾಗಿದೆ ಎಂದರು.

**» 8ರ ಬದಲಾಗಿ 15 ವಲಯಗಳ ರಚನೆ**

ಬೆಂಗಳೂರು ಅಗಾಧವಾಗಿ ಬೆಳೆದಿದೆ. ಹೀಗಾಗಿ ಬಿಬಿಎಂಪಿ ಪರಿಧಿಯನ್ನು 1 ಕಿ.ಮೀ. ವ್ಯಾಪ್ತಿಯ ಗ್ರಾಪಂ, ಪಟ್ಟಣ ಪಂಚಾಯಿತಿ, ಪುರಸಭೆಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಹಾಗೆಯೇ, ಬಿಬಿಎಂಪಿ ಸದಸ್ಯರಾಗಿ ಎಂಎಲ್ಎ, ಎಂಎಲ್ಸಿ, ಲೋಕಸಭೆ ಸದಸ್ಯರಾಗಿದ್ದರೆ 6 ತಿಂಗಳ ಒಳಗೆ ಯಾವುದಾದರೂ ಒಂದು ಸ್ಥಾನವನ್ನು ಮಾತ್ರ ಉಳಿಸಿಕೊಳ್ಳಲು ಈ ಕಾಯ್ದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಎರಡೂ ಕಡೆ ಹುದ್ದೆ ಹೊಂದಿರಬಾರದು ಎಂದು ಸ್ಪಷ್ಟಪಡಿಸಲಾಗಿದೆ ಎಂದು ವಿವರಿಸಿದರು.

ಶಾಸಕರ ಅಧ್ಯಕ್ಷತೆಯಲ್ಲಿ ಕನ್ಸಲ್ಟೇಟಿವ್ ಸಮಿತಿ ಮಾಡಿ ಸದಸ್ಯರನ್ನು ನೇಮಕ ಮಾಡುತ್ತೇವೆ. ಹಾಲಿ 8 ವಲಯಗಳಿದ್ದು, ಅವುಗಳನ್ನು ಗರಿಷ್ಠ 15ರವರೆಗೆ ಹೆಚ್ಚಿಸಲು ಅವಕಾಶ ಮಾಡಿಕೊಡಲಾಗಿದೆ. ವಲಯ ಸಮಿತಿ ಇರಬೇಕೆಂದು ಅವಕಾಶ ಮಾಡಲಾಗಿದೆ. ಅದರಲ್ಲಿ ಶಾಸಕರು, ಕಾರ್ಪೋರೇಟರ್‌ಗಳು ಸೇರಿ ಜನಪ್ರತಿನಿಧಿಗಳು ಇರಲಿದ್ದಾರೆ. ಪ್ರತಿ ವಲಯಕ್ಕೆ ಸರ್ಕಾರದ ಕಾರ್ಯದರ್ಶಿ ಹಂತದ ಅಧಿಕಾರಿ ಮುಖ್ಯಸ್ಥರಾಗಿರುತ್ತಾರೆ. ಮನರಂಜನಾ ತೆರಿಗೆ, ಜಾಹೀರಾತು ಶುಲ್ಕ, ಮಳೆನೀರು ಕೊಯ್ಲು ಕಡ್ಡಾಯದಂತಹ ಅಂಶಗಳನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಅಪಾಯಕಾರಿ ಕಲ್ಲುಗಣಿಗಳಿದ್ದರೆ ಅದನ್ನು ತಡೆಯುವ ಅವಕಾಶವನ್ನು ಪಾಲಿಕೆಗೆ ನೀಡಲಾಗಿದೆ ಎಂದು ಹೇಳಿದರು.




### ಮುಂದೇನು?

1 ಕ್ಷೇತ್ರ ಮರುವಿಂಗಡಣೆ ಬಳಿಕವೇ ಬಿಬಿಎಂಪಿ ಚುನಾವಣೆ ನಡೆಸಬೇಕೆಂಬ ಬೆಂಗಳೂರು ಶಾಸಕರ ಒತ್ತಾಸೆಗೆ ಪೂರಕವಾಗಿ ಭೂಮಿಕೆ ಸಿದ್ಧ.

2 ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಒಪ್ಪಿಗೆ ರೂಪದ ಮಸೂದೆಯನ್ನು ರಾಜ್ಯಪಾಲರ ಸಹಿಗೆ ಕಳುಹಿಸಲಾಗುತ್ತದೆ.

3 ರಾಜ್ಯಪಾಲರ ಅಂಕಿತ ಬೀಳುತ್ತಿದ್ದಂತೆ ಹೊಸ ಕಾನೂನು ತಂದಿರುವ ಬಗ್ಗೆ ನ್ಯಾಯಾಲಯದಲ್ಲಿ ಪ್ರಸ್ತಾಪಿಸಲಾಗುತ್ತದೆ. ಜತೆಗೆ ಹೊಸ ಕಾನೂನಿನಂತೆ ನಡೆಯಲು ಕಾಲಾವಕಾಶ ಕೋರಲಾಗುತ್ತದೆ.

4 ಈ ಅಂಶವನ್ನೇ ಮುಂದಿಟ್ಟುಕೊಂಡು ನ್ಯಾಯಾಲಯದಲ್ಲಿ ಸರ್ಕಾರ ವಾದ ಮಂಡಿಸಲಿದೆ. ಮುಂದಿನ ಹಂತದಲ್ಲಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ನಡೆಯಲಿದೆ.

### ನಿಯಮವನ್ನು ಬಿಟ್ಟು ಮಾತನಾಡಬೇಡಿ!

**ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿ ಸದಸ್ಯರಾಗಿದ್ದುಕೊಂಡು ನಿಯಮ ಬಿಟ್ಟು ಮಾತನಾಡಬೇಡಿ ಎಂದು ಸದಸ್ಯ ಅರವಿಂದ ಲಿಂಬಾವಳಿ ಅವರಿಗೆ ಸಚಿವ ಜೆ.ಸಿ. ಮಾಧುಸ್ವಾಮಿ ಮಾತಿನ ಗುದ್ದು ನೀಡಿದರು. ಚರ್ಚೆ ವೇಳೆ ಲಿಂಬಾವಳಿ ವಿವಿಧ ವಿಚಾರ ಪ್ರಸ್ತಾಪ ಮಾಡುತ್ತಿದ್ದಂತೆ, ಸಚಿವರು ನಿಯಮಾವಳಿ ಪುಸ್ತಕದೊಂದಿಗೆ ತಮ್ಮ ಆಸನದಿಂದೆದ್ದು ಲಿಂಬಾವಳಿ ಬಳಿ ಆಗಮಿಸಿ ನಿಯಮ ಪುಸ್ತಕ ಗಮನಿಸಿ, ನಿಯಮ ಬಿಟ್ಟು ಮಾತನಾಡಬೇಡಿ ಎಂದು ತಾಕೀತು ಮಾಡಿದರು. ಇದರಿಂದ ಲಿಂಬಾವಳಿ ಕಸಿವಿಸಿಗೊಂಡು ಸಮರ್ಥನೆಗೆ ನಿಂತರು. ಮುನಿರತ್ನ ಮಾತನಾಡಲು ಎದ್ದಾಗ ಕಂದಾಯ ಸಚಿವ ಅಶೋಕ್, ಚರ್ಚೆ ಬೇಡವೆಂದು ಸಂಜ್ಞೆ ಮಾಡಿ ಕುಳಿತುಕೊಳ್ಳುವಂತೆ 2-3 ಬಾರಿ ಸೂಚಿಸಿದರು. ಈ ವೇಳೆ, 'ಅಶೋಕಣ್ಣ ಮಾತು ನಿಲ್ಲಿಸುವಂತೆ ಹೇಳುತ್ತಿದ್ದಾರೆ, ನೀವಾದರೂ ಹೇಳಿ' ಎಂದು ಸ್ಪೀಕರ್ ಮೊರೆಹೋದರು. ಈ ವಿಧೇಯಕ ಪರಿಷತ್‌ನಲ್ಲೂ ಒಪ್ಪಿಗೆ ಪಡೆಯಬೇಕಿರುವುದರಿಂದ ತರಾತುರಿ ಮಾಡುತ್ತಿರುವುದಾಗಿ ಕುಳಿತಲ್ಲಿಂದಲೇ ಸಮಜಾಯಿಷಿ ನೀಡಿದರು.**

### ವಿಸ್ತರಣೆಗೆ ಪುನಾರಚನಾ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಸ್ತರಣೆಗೆ ಶೀಘ್ರ ಪುನಾರಚನಾ ಸಮಿತಿ ಮಾಡಲಾಗುವುದು ಎಂದು ಕಾನೂನು ಸಚಿವ ಮಾಧುಸ್ವಾಮಿ ಮೇಲ್ಮನೆಯಲ್ಲಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಮುಖ್ಯಮಂತ್ರಿ ಪರವಾಗಿ 'ಬಿಬಿಎಂಪಿ ವಿಧೇಯಕ 2020'ನ್ನು ಅನುಮೋದನೆಗೆ ಮಂಡಿಸಿ, ಎಲ್ಲ ಪಕ್ಷದ ಶಾಸಕರು ಬಿಬಿಎಂಪಿ ವ್ಯಾಪ್ತಿ ವಿಸ್ತರಣೆಗೆ ಬಯಸಿದ್ದಾರೆ. ಅದಕ್ಕಾಗಿ ಜಂಟಿ ಸದನ ಸಮಿತಿ ರಚಿಸಿ ಕಾಯ್ದೆ ಸಿದ್ಧಪಡಿಸಲಾಗಿದೆ. ಅದರಂತೆ ಬಿಬಿಎಂಪಿ ವ್ಯಾಪ್ತಿಯ ಸುತ್ತಳತೆ 1 ಕಿ.ಮೀ. ವಿಸ್ತರಿಸಲು ಕಾಯ್ದೆಯಲ್ಲಿ ಶಿಫಾರಸು ಮಾಡಲಾಗಿದೆ. ಅದರಂತೆ ವಿಧಾನ ಮಂಡಲದಲ್ಲಿ ಕಾಯ್ದೆಗೆ ಅನುಮೋದನೆ ದೊರೆತ ಕಾರಣ ಶೀಘ್ರದಲ್ಲಿ ಬಿಬಿಎಂಪಿ ಪುನಾರಚನಾ ಸಮಿತಿ ರಚಿಸಲಾಗುವುದು ಎಂದರು.

**» ಬಿಬಿಎಂಪಿ ಕಾಯ್ದೆಗೆ ಮೇಲ್ಮನೆಯಲ್ಲಿ ಒಪ್ಪಿಗೆ**

**ನೇಮಕಾತಿ ಅಧಿಕಾರ ಪಾಲಿಕೆಗೆ ಕೊಡಿ:** ವಿಧೇಯಕದ ಬಗ್ಗೆ ಮಾತನಾಡಿದ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್, ಬಿಬಿಎಂಪಿಯಲ್ಲಿ ಹುದ್ದೆ ಖಾಲಿಯಾದರೆ ಸರ್ಕಾರವೇ ಭರ್ತಿ ಮಾಡಬೇಕಿದೆ. ಇದರಿಂದ ಹುದ್ದೆ ಭರ್ತಿ ವಿಳಂಬವಾಗುತ್ತದೆ. ಆದ್ದರಿಂದ ನೇಮಕಾತಿ ಅವಕಾಶವನ್ನು ಬಿಬಿಎಂಪಿಗೆ ಕೊಡಬೇಕು ಎಂದು ಹೇಳಿದರು.

**ಬಿಬಿಎಂಪಿ ವಿಭಜಿಸಿ:** ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಈಗಿರುವ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದೇ ಕಷ್ಟವಾಗಿದೆ. ಹೀಗಿರುವಾಗ ವಿಸ್ತರಣೆ ಮಾಡುವುದು ಸರಿಯಲ್ಲ. ಅದರ ಬದಲು ಬಿಬಿಎಂಪಿಯನ್ನು ಹಳೆಯ ಮತ್ತು ಹೊಸ ಬಿಬಿಎಂಪಿಯನ್ನು ವಿಭಜಿಸಿ, ಆಡಳಿತ ಸುಗಮಗೊಳಿಸಿ. ಹಾಗೆಯೇ, ಮೇಯರ್ ಮತ್ತು ಉಪ ಮೇಯರ್ ಅವಧಿಯನ್ನು 5 ವರ್ಷಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

### ಕಸದಿಂದಲೂ ಆದಾಯ ಸಾಧ್ಯ

**ಚರ್ಚೆಯಲ್ಲಿ ಪಾಲ್ಗೊಂಡ ಶಾಸಕ ಅರವಿಂದ ಲಿಂಬಾವಳಿ, ಕಳೆದ ಬಾರಿ ಬಿಬಿಎಂಪಿ ಚುನಾವಣೆ ಬಹುಮತ ನಮ್ಮ ಪಕ್ಷಕ್ಕಿತ್ತು. ಆದರೆ, ಬೇರೆ ಊರುಗಳಲ್ಲಿ ಆಯ್ಕೆಯಾಗಿ ಬಂದ ಮೇಲ್ಮನೆ ಸದಸ್ಯರು, ರಾಜ್ಯಸಭೆ ಸದಸ್ಯರು ಮೇಯರ್ ಆಯ್ಕೆಗೆ ಮತದಾರರಾಗಿದ್ದರು. ಇದು ಬದಲಾಗಬೇಕು ಎಂದರು. ಕಸ ಸಂಗ್ರಹಿಸಲು ಗುತ್ತಿಗೆದಾರರಿಗೆ ಹಣ ನೀಡುತ್ತಿದ್ದೇವೆ, ಕಸದಿಂದಲೂ ಆದಾಯ ಗಳಿಸಲು ಅವಕಾಶವಿದೆ. ಆ ಬಗ್ಗೆ ಯೋಚಿಸಬೇಕು ಎಂದರು. ವಾರ್ಡ್‌ಗಳಿಗೆ ಜನಸಂಖ್ಯೆ ಸಮಾನವಾಗಿ ಹಂಚಿಕೆಯಾಗಿಲ್ಲ. ಜನಗಣತಿ ಪರಿಗಣಿಸುವ ಬದಲು ಮತದಾರರ ಪಟ್ಟಿಯನ್ನು ಪರಿಗಣಿಸುವುದು ಸೂಕ್ತ ಎಂದು ಬಿಜೆಪಿಯ ನೂತನ ಶಾಸಕ ಮುನಿರತ್ನ ಸಲಹೆ ನೀಡಿದರು.**

